ಬೇರೆ ವಿಷಯಗಳ ಚರ್ಚೆಗೆ ಕಾಲ ಕಳೆದುಹೋಗುತ್ತಿದೆ. ಬಜೆಟ್ ಅಧಿವೇಶನದಲ್ಲಿ ಬಜೆಟ್ ಮೇಲೆಯೇ ಯಾರೂ ಮಾತನಾಡುವುದಕ್ಕೆ ರೆಡಿ ಇಲ್ಲ. ಈ ರೀತಿಯಾಗಬಾರದು. ಅದೂ ಅಲ್ಲದೇ ಬಹಳ ಜನರು ಹೆಸರುಗಳನ್ನು ಕೊಟ್ಟಿದ್ದಾರೆ. ದಯಮಾಡಿ ಎಲ್ಲರು ಸಹಕರಿಸಿ. ಮಾನ್ಯ ಕಾರ್‌ಜೋಳ್‌ರವರೇನೋ ಎಸ್‌ಸಿ:ಎಸ್‌ಟಿ ನೌಕರರುಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಎಂದು ಹೇಳುತ್ತಿರುವುದರಿಂದ ಆ ಬಗ್ಗೆ ಸರ್ಕಾರದ ಗಮನ ಸೆಳೆಯಲು ಅವರಿಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಮಿಕ್ಕ ಎಲ್ಲರಿಗೂ ನಾಳೆ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ಮಾನ್ಯ ಕಾರ್‌ಜೋಳ್‌ರವರೆ ತಾವು ಪ್ರಸ್ತಾಪ ಮಾಡಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇದಾದ ಮೇಲೆ ವಿತ್ತೀಯ ಕಾರ್ಯಕಲಾಪ ಪ್ರಾರಂಭ ಮಾಡೋಣ.

ಆ. ವಿಷಯ: ನೀರಾವರಿ ಹಾಗೂ ಲೋಕೋಪಯೋಗಿ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಇಂಜಿನಿಯರ್‌ಗಳ ಸೇವೆಯನ್ನು ಖಾಯಂ ಮಾಡುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರ್‌ಜೋಳ್ (ಮುಧೋಳ್): – ಮಾನ್ಯ ಅಧ್ಯಕ್ಷರೆ, ನೀರಾವರಿ ಹಾಗೂ ಲೋಕೋಪಯೋಗಿ ಇಲಾಖೆಗಳಲ್ಲಿ ಇಂಜಿನಿಯರ್‌ಗಳನ್ನು ನೇಮಕಾತಿ ಮಾಡುವಾಗ ಪದವೀಧರ ಇಂಜಿನಿಯರ್‌ಗಳು ಹಾಗೂ ಡಿಪ್ಲೊಮೋ ಕೋರ್ಸ್ ಆದಂಥವರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದ್ದರಿಂದ ಪರಿಶಿಷ್ಟ ಜಾತಿ ಜನಾಂಗದವರಿಗೆ ಮೀಸಲಿರಿಸಿದ್ದಂಥ ಸ್ಥಾನಗಳು ಭರ್ತಿ ಆಗದೇ ಖಾಲಿ ಉಳಿದಿದ್ದವು, ಅವುಗಳನ್ನು ಭರ್ತಿ ಮಾಡುವುದಕ್ಕಾಗಿ ಹಿಂದಿನ ಸರ್ಕಾರ 2001ರ ಸೆಪ್ಟೆಂಬರ್‌ನಲ್ಲಿ ಸ್ಪೆಶಲ್ಸ್ ರೂಲ್ಸ್‌ನ್ನು ಮಾಡಿದೆ. 2001ರಲ್ಲಿ ಸ್ಪೆಶಲ್ ರೂಲ್ಸ್‌ನ್ನು ಮಾಡಿ ಈ ರಾಜ್ಯದಲ್ಲಿರತಕ್ಕಂಥ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕೆಂದು ಹೇಳಿ ಒಂದು ನೋಟಿಫಿಕೇಶನ್‌ನ್ನು ಮಾಡಿದರು. ಹಾಗೆ ನೋಟಿಫಿಕೇಶನ್ ಮಾಡುವಂಥ ಸಂದರ್ಭದಲ್ಲಿ ಸರ್ಕಾರ ಹೆಚ್ಚು ಕಾಳಜಿ ವಹಿಸಿ ಮಾಡಬೇಕಾಗಿತ್ತು. ಈ ಬ್ಯಾಕ್‌ಲಾಗ್ ಹುದ್ದೆಗಳು ಟೆಂಪರರಿ ಹುದ್ದೆಗಳಲ್ಲ. ಇವು ಖಾಯಂ ಹುದ್ದೆಗಳು. ಈ ಖಾಯಂ ಹುದ್ದೆಗಳನ್ನು ನೇಮಕಾತಿ ಮಾಡುವಾಗ ಗುತ್ತಿಗೆ ಆಧಾರದ ಮೇಲೆ ಏಕೆ ನೇಮಕಾತಿಯನ್ನು ಇವರು ಮಾಡಿದರು? ಇದನ್ನು ಪ್ರಶ್ನೆ ಮಾಡತಕ್ಕಂಥದ್ದು ಇಂದು ಅವಶ್ಯಕವಿದೆ. ಇವುಗಳು ಖಾಯಂ ಹುದ್ದೆಗಳಾಗಿರುವುದರಿಂದ ಉಳಿದವರನ್ನು ಯಾವ ರೀತಿಯಾಗಿ ಖಾಯಂ ಆಗಿ ನೇಮಕಾತಿ ಮಾಡಿಕೊಂಡಿದ್ದೀರೋ ಅದೇ ರೀತಿಯಾಗಿ ಸ್ಪೆಶಲ್ ರೂಲ್ಸ್ ಕೆಳಗಡೆ ಇವರನ್ನೂ ನೇಮಕಾತಿ ಮಾಡಬೇಕಾಗಿತ್ತು. ಆದರೆ ಸರ್ಕಾರ ತಪ್ಪು ಮಾಡಿ ಕೇವಲ ಒಂದು ವರ್ಷದ ಮಟ್ಟಿಗೆ ಗುತ್ತಿಗೆ ಆಧಾರದ ಮೇಲೆ ಎಂದು ಹೇಳಿ ನೇಮಕಾತಿ ಮಾಡಿಕೊಂಡು ಆರು, ಆರು ತಿಂಗಳು ಎಕ್ಸ್‌ಟೆನ್‌ಶನ್ ಮಾಡಿಕೊಳ್ಳುತ್ತಾ ಬಂದರು. ಇದರಿಂದಾಗಿ ಈ ರಾಜ್ಯದಲ್ಲಿರತಕ್ಕಂಥ ಪರಿಶಿಷ್ಟ ಜಾತಿ ಜನಾಂಗದ ಬಡವರ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತಿದೆ. ಮತ್ತೆ ಇನ್ನೂ ಎಷ್ಟೋ ಕಡೆ ಏನಾಗಿದೆಯೆಂದರೆ ಇಂಥ ಇಂಜಿನಿಯರ್ ನೌಕರಿಯಲ್ಲಿರುವ ಕೆಲವು ಹುಡುಗರನ್ನು ಕೆಲವು ಅನುಕೂಲಸ್ಥ ಮನೆಯ ಹೆಣ್ಣು ಮಕ್ಕಳು ಮದುವೆ

ಮಾಡಿಕೊಂಡಿದ್ದಾರೆ. ಅಂಥವರ ಗತಿ ಏನು ಹೇಳಿ. ಅವರನ್ನು ನೀವು ಖಾಯಂಗೊಳಿಸದೇ ಹೋದರೆ ಅವರು ಸೋಡಾಚೀಟಿ ಕೊಡುವಂಥ ಪ್ರಸಂಗವೂ ಬರುತ್ತದೆ. ಏಕೆಂದರೆ ಈ ಹುಡುಗ ಇಂಜಿನಿಯರ್ ಆಗಿದ್ದಾನೆ ಎಂದೇ ಅವರು ಇವನಿಗೆ ಹೆಣ್ಣು ಕೊಟ್ಟಿದ್ದಾರೆ. ನಾಳೆ ಅವರು ಆ ಹೆಣ್ಣು ಮಕ್ಕಳು ಗಂಡನ ಜೊತೆಯಲ್ಲಿ ಬರದೇ ಹೋಗಬಹುದು. ಇಂಥ ಒಂದು ಕಠಿಣ ಪರಿಸ್ಥಿತಿ ಇದೆ. ಆದುದರಿಂದ ನಾನು ಹೇಳುವುದೇನೆಂದರೆ ಈ ಹುದ್ದೆಗಳೆಲ್ಲವೂ ಟೆಂಪರರಿ ಹುದ್ದೆಗಳಲ್ಲ. ಅವುಗಳು ಖಾಯಂ ಹುದ್ದೆಗಳು. ಅವು ಸ್ಯಾಂಕ್ಷನ್ಡ್ ಪೋಸ್ಟ್‌ಗಳು. ಈಗೇನು ಸುಮಾರು 1284 ಜನರನ್ನು ನೇಮಕಾತಿ ಮಾಡಿಕೊಂಡಿದ್ದೀರಿ, ಒಂದೇ ಆದೇಶದಲ್ಲಿ ಖಾಯಂಗೊಳಿಸಿ ಅವರನ್ನು ಸತ್ಯಾಗ್ರಹವನ್ನು ಕೈಬಿಡುವಂತೆ ಇವತ್ತೆ ಆದೇಶ ಹೊರಡಿಸಬೇಕೆಂದು ಸರ್ಕಾರಕ್ಕೆ ನಾನು ಮನವಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು): – ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ, ಈ ಹೇಳಿಕೆಯನ್ನು ಓದುತ್ತೇನೆ.

ಲೋಕೋಪಯೋಗಿ, ಜಲ ಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳಲ್ಲಿ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ವೃಂದಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ್ದ ಬ್ಯಾಕ್‌ಲಾಗ್ ಹುದ್ದೆಗಳಿಗೆದುರಾಗಿ ಎರಡು ಹಂತಗಳಲ್ಲಿ ಸದರಿ ಜಾತಿ ಮತ್ತು ಪಂಗಡದ ಇಂಜಿನಿಯರ್‌ಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕ ಮಾಡಲಾಗಿತ್ತು. ಮೊದಲನೆ ಹಂತದಲ್ಲಿ 462 ಸಹಾಯಕ ಇಂಜಿನಿಯರ್ ಮತ್ತು 243 ಕಿರಿಯ ಇಂಜಿನಿಯರ್‌ಗಳನ್ನು ಸಪ್ಟೆಂಬರ್‌ನಲ್ಲಿ ಹಾಗೂ ಎರಡನೇ ಹಂತದಲ್ಲಿ 384 ಸಹಾಯಕ ಇಂಜಿನಿಯರ್ ಮತ್ತು 258 ಕಿರಿಯ ಇಂಜಿನಿಯರ್‌ಗಳನ್ನು 2004ರ ಜನವರಿ/ಫೆಬ್ರವರಿಯಲ್ಲಿ (ಒಟ್ಟು 1347) ನೇಮಕಾತಿ ಮಾಡಲಾಗಿತ್ತು. ಈ ಪೈಕಿ, 41 ಸಹಾಯಕ ಇಂಜಿನಿಯರ್ ಮತ್ತು 22 ಕಿರಿಯ ಇಂಜಿನಿಯರ್‌ಗಳು (ಒಟ್ಟು 63) ಕರ್ತವ್ಯಕ್ಕೆ ಹಾಜರಾಗಿಲ್ಲ.

ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ: 15422–31/02ರಲ್ಲಿ ದಿ: 5–3–03ರಂದು ನೀಡಿದ ತೀರ್ಪಿನಲ್ಲಿ ಸರ್ಕಾರದ ತುರ್ತು ಕೆಲಸಗಳ ನಿರ್ವಹಣೆಗಾಗಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ಎದುರಾಗಿ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ನೇಮಕಾತಿಗೆ ನಿರಾಕ್ಷೇಪಣೆಯನ್ನು ನೀಡುತ್ತಾ, ಇತರೆ ಸಲಹೆಗಳೊಂದಿಗೆ, ಸದರಿ ಹುದ್ದೆಗಳನ್ನು ಸಕಾಲದಲ್ಲಿ 2001ರ ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ಭರ್ತಿ ಮಾಡಲು ಅಧಿಕೃತವಾಗಿ ಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿತ್ತು. ಸದರಿ ಸಲಹೆಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ಈ ವಿಷಯದ ಬಗ್ಗೆ ತನ್ನ ಮುಂದೆ ಸಲ್ಲಿಸಲ್ಪಟ್ಟಿದ್ದ ರಿಟ್ ಅರ್ಜಿಗಳಲ್ಲಿಯೂ ಎತ್ತಿ ಹಿಡಿದಿದೆ. ನ್ಯಾಯ ಮಂಡಳಿಯ ನಿರ್ದೇಶನದಂತೆ 2001ರ ವಿಶೇಷ ನೇಮಕಾತಿ ನಿಯಮಗಳನ್ವಯ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಸರ್ಕಾರಕ್ಕೆ ಸೂಚಿಸಬೇಕೆಂದು ಸೇರಿದಂತೆ ಇತರೆ

ಪರಿಹಾರಗಳನ್ನು ಅಪೇಕ್ಷಿಸಿ ನ್ಯಾಯಮಂಡಳಿಯ ಮುಂದೆ ಸಲ್ಲಿಸಲ್ಪಟ್ಟಿರುವ ಹಲವಾರು ಅರ್ಜಿಗಳು ಹಾಗೂ ನಿಂದನಾ ಅರ್ಜಿಗಳು ವಿಚಾರಣೆ ಹಂತದಲ್ಲಿವೆ.

ಈ ಮಧ್ಯೆ, ಎರಡು ಹಂತಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರ್‌ಗಳ ಸೇವೆಯನ್ನು ಸಕ್ರಮಗೊಳಿಸಲು ಮತ್ತು ಹಾಗೆ ಸಕ್ರಮಗೊಳಿಸುವ ತನಕ ಸದರಿ ಇಂಜಿನಿಯರ್‌ಗಳ ಗುತ್ತಿಗೆ ಅವಧಿಯನ್ನು ಕಾಲಕಾಲಕ್ಕೆ 6 ತಿಂಗಳ ಅವಧಿಗೆ ವಿಸ್ತರಿಸಬೇಕೆಂದು ತೀರ್ಮಾನಿಸಿದ್ದು, ಅದರಂತೆ ಮುಂದಿನ ಅಗತ್ಯ ಕ್ರಮಗಳನ್ನು ಜರುಗಿಸಲಾಗುತ್ತಿದೆ.

2003ರ ಸೆಪ್ಟೆಂಬರ್‌ನಲ್ಲಿ ಒಂದು ವರ್ಷದ ಅವಧಿಗೆ ನೇಮಕಗೊಂಡಿದ್ದ ಇಂಜಿನಿಯರ್‌ಗಳ ಗುತ್ತಿಗೆ ಅವಧಿಯನ್ನು 2004ರ ಸೆಪ್ಟೆಂಬರ್‌ನಿಂದ 2005ರ ಫೆಬ್ರವರಿಯವರೆಗೆ ಪುನಃ 6 ತಿಂಗಳ ಅವಧಿಗೆ ಮುಂದುವರಿಸಲಾಗಿತ್ತು. ನಂತರ 2005ರ ಫೆಬ್ರವರಿಯಿಂದ ಮುಂದಿನ 6 ತಿಂಗಳಿಗೆ ವಿಸ್ತರಿಸುವ ಸಮಯದಲ್ಲಿ ನ್ಯಾಯಮಂಡಳಿಯು ದಿ: 8-4-05ರವರೆಗೆ ಮಾತ್ರ ಮುಂದುವರಿಸಲು ಸೂಚಿಸಿರುವ ಮೇರೆಗೆ ಅಲ್ಲಿಯವರೆಗೆ ಮಾತ್ರ ಮುಂದುವರಿಸಲಾಗಿದೆ.

2004ರ ಜನವರಿ/ಫೆಬ್ರವರಿಯಲ್ಲಿ ಒಂದು ವರ್ಷದ ಅವಧಿಗೆ ನೇಮಕಗೊಂಡಿದ್ದ ಇಂಜಿನಿಯರ್‌ಗಳ ಗುತ್ತಿಗೆ ಅವಧಿಯನ್ನು 2005ರ ಜನವರಿ/ಫೆಬ್ರವರಿಯಿಂದ ಪುನಃ 6 ತಿಂಗಳ ಅವಧಿಗೆ ಮುಂದುವರಿಸಲಾಗಿದ್ದು, ಸದರಿಯವರ ಅವಧಿಯು ಜೂನ್/ಜುಲೈಗೆ ಅಂತ್ಯಗೊಳ್ಳಲಿದೆ.

ನ್ಯಾಯಮಂಡಳಿ ಮುಂದೆ ಸಲ್ಲಿಸಲ್ಪಟ್ಟಿರುವ ಅರ್ಜಿಗಳು/ನಿಂದನಾ ಅರ್ಜಿ ದಿ: 8-4-05ರಂದು ಪುನಃ ವಿಚಾರಣೆಗೆ ಬರುತ್ತಿದ್ದು, ರಾಜ್ಯದ ಪರವಾಗಿ ಅಡ್ವೋಕೇಟ್ ಜನರಲ್‌ರವರು ಹಾಜರಾಗುತ್ತಿದ್ದು, ನ್ಯಾಯಮಂಡಳಿಯು ನೀಡುವ ತೀರ್ಪಿನ ಹಿನ್ನೆಲೆಯಲ್ಲಿ ಈ ಇಂಜಿನಿಯರ್‌ಗಳ ಗುತ್ತಿಗೆ ಅವಧಿಯನ್ನು ಮುಂದುವರಿಸುವ ಮತ್ತು ಇವರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು:- ಈಗ ದಯಮಾಡಿ, ಶೂನ್ಯ ವೇಳೆಯಲ್ಲಿ ಯಾರಿಗೂ ಅವಕಾಶ ಮಾಡಿ ಕೊಡುವುದಿಲ್ಲ. ಈಗ ವಿತ್ತೀಯ ಕಾರ್ಯಕಲಾಪಗಳು. ದಯಮಾಡಿ ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡಿ. ದಯಮಾಡಿ ಎಲ್ಲರು ಸಹಕರಿಸಬೇಕು. ನಾಳೆ ಎಲ್ಲರಿಗೂ ಶೂನ್ಯವೇಳೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ನೆಹರು ಚೆನ್ನಬಸಪ್ಪ ಓಲೇಕಾರ್:- ಮಾನ್ಯ ಅಧ್ಯಕ್ಷರೆ, ಬಹಳ ಮಹತ್ವವಾದಂತಹ ವಿಚಾರ. ದಯಮಾಡಿ ಹತ್ತು ನಿಮಿಷ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:- ಈಗ ವಿತ್ತೀಯ ಕಾರ್ಯಕಲಾಪಗಳು, ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿ.